**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಸಂಖ್ಯೆ | : | 258(252) |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.03.2020 |
| ಉತ್ತರಿಸುವ ಸಚಿವರು | : | ಮಾನ್ಯ ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಹೊಂಡಗಳ ಅಕ್ರಮಗಳ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸಲು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿದ ಬಳಿಕ ಅಕ್ರಮಗಳ ಕುರಿತ ವರದಿಯನ್ನು ಯಾವಾಗ ಸಲ್ಲಿಸಲಾಗಿದೆ; | 2014-15 ನೇ ಸಾಲಿನಿಂದ 2017-18 ನೇ ಸಾಲಿನವರೆಗೆ ಕೃಷಿ ಭಾಗ್ಯ ಯೋಜನೆಯಡಿ ನಿರ್ಮಾಣವಾಗಿರುವ ಕೃಷಿ ಹೊಂಡಗಳ ಕುರಿತು ಪರಿಶೀಲನಾ ವರದಿಯು ದಿನಾಂಕ: 23.01.2020 ರಂದು ಸರ್ಕಾರಕ್ಕೆ ಸಲ್ಲಿಕೆಯಾಗಿರುತ್ತದೆ. |
| ಆ) | ಕೃಷಿ ಹೊಂಡಗಳ ಅಕ್ರಮಗಳ ಕುರಿತು ವರದಿ ತಯಾರಿಸಲು ಯಾವ ಅಧಿಕಾರಿಯನ್ನು ನೇಮಿಸಲಾಗಿತ್ತು; ಎಷ್ಟು ಕೃಷಿ ಹೊಂಡಗಳ ನಿರ್ಮಾಣದಲ್ಲಿ ಅಕ್ರಮ ಪತ್ತೆಯಾಗಿದೆ; ಈ ಅಕ್ರಮಗಳಿಗೆ ಯಾವ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಕೃಷಿ ಹೊಂಡದಲ್ಲಿ ಅಕ್ರಮ ಎಸಗಿದ ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ; | ಜಿಲ್ಲೆಗಳಲ್ಲಿ ಕೃಷಿ ಹೊಂಡಗಳ ಪರಿಶೀಲನೆಯನ್ನು, ಫಲಾನುಭವಿವಾರು, ವರ್ಷವಾರು, ಗ್ರಾಮವಾರು ಶೇ.100 ರಷ್ಟು ಸ್ಥಳ ಪರಿಶೀಲನೆ ಮಾಡಲು ಸಹಾಯಕ ಕೃಷಿ ಅಧಿಕಾರಿ ಹಾಗೂ ಕೃಷಿ ಅಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ ಇದಲ್ಲದೇ ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು ಹಾಗೂ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಅನಿಯಮಿತ (Random) ವಾಗಿ, ಪರಿಶೀಲನೆ ಕೈಗೊಂಡು ವರದಿ ತಯಾರಿಸಿ ದೃಢೀಕರಿಸಿರುತ್ತಾರೆ. ಸ್ಥಳ ಪರಿಶೀಲನೆಯಲ್ಲಿ ಅಕ್ರಮದ ಬಗ್ಗೆ ವರದಿಯಾಗಿರುವುದಿಲ್ಲ.<br>2014-15 ನೇ ಸಾಲಿನಿಂದ 2017-18 ನೇ ಸಾಲಿನವರೆಗೆ ಪರಿಶೀಲಿಸಲಾದ ಒಟ್ಟು:188075 ಕೃಷಿ ಹೊಂಡಗಳಲ್ಲಿ 16623 ಕೃಷಿ ಹೊಂಡಗಳನ್ನು, ನೆರೆ |

| | | |
|---|---|---|
| | | ಹಾವಳಿ, ಹೂಳು ತುಂಬಿರುವುದರಿಂದ, ಸತತ ಬರಗಾಲದಿಂದಾಗಿ, ಬೆಳೆ ಬೆಳೆಯುವ ಸಲುವಾಗಿ, ಮಳೆ ಪ್ರಮಾಣ ಕಡಿಮೆಯಾಗಿ ನೀರಿನ ಕೊರತೆಯಿಂದಾಗಿ, ವೈಯಕ್ತಿಕ ಕಾರಣದಿಂದಾಗಿ, ನಗರೀಕರಣದಿಂದಾಗಿ, ಭೂ ಹಂಚಿಕೆ, ಜಮೀನು ಮಾರಾಟ, ಜಮೀನು ಅಭಿವೃದ್ಧಿ, ಮುಂತಾದ ಕಾರಣಗಳಿಂದಾಗಿ ಫಲಾನುಭವಿಗಳಿಂದ ಮುಚ್ಚಲ್ಪಟ್ಟಿರುತ್ತವೆ. ಈ ಕುರಿತು ಫಲಾನುಭವಿಗಳು ಕೃಷಿ ಹೊಂಡಗಳನ್ನು ಯೋಜನೆಯಡಿ ಪಡೆದಿರುವುದಾಗಿ ಕ್ಷೇತ್ರ ಪರಿಶೀಲನಾ ಸಮಯದಲ್ಲಿ ದೃಢೀಕರಣ ನೀಡಿರುತ್ತಾರೆ. |
| ಇ) | 2018-19 ಮತ್ತು 2019-2020 ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು; ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ; ಕೃಷಿ ಹೊಂಡಗಳನ್ನುನಿರ್ಮಿಸಿದ ಬಗ್ಗೆ ಅಧಿಕೃತ ವರದಿ ನೀಡುವ ಅಧಿಕಾರಿ ಯಾರು; | **ಕೃಷಿ ಇಲಾಖೆ:** 2018-19 ನೇ ಸಾಲಿನಲ್ಲಿ 69101 ಕೃಷಿ ಹೊಂಡಗಳನ್ನು ಹಾಗೂ 2019-2020 ನೇ ಸಾಲಿನ ಜನವರಿ ಮಾಹೆಯ ಅಂತ್ಯದವರೆಗೆ 23516 ಕೃಷಿ ಹೊಂಡಗಳನ್ನು ರಾಜ್ಯದಲ್ಲಿ ನಿರ್ಮಾಣ ಮಾಡಲಾಗಿದೆ. ಕೃಷಿ ಹೊಂಡಗಳನ್ನು ನಿರ್ಮಿಸಿದ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರು ಅಧಿಕೃತ ವರದಿ ನೀಡುವ ಅಧಿಕಾರಿಗಳಾಗಿರುತ್ತಾರೆ.<br>**ಜಲಾನಯನ ಅಭಿವೃದ್ಧಿ ಇಲಾಖೆ:** ಜಲಾನಯನ ಅಭಿವೃದ್ಧಿ ಇಲಾಖೆಯಿಂದ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿ 2018-19ನೇ ಸಾಲಿನಲ್ಲಿ 2382 ಕೃಷಿ ಹೊಂಡಗಳು ಮತ್ತು 2019-20ನೇ ಸಾಲಿನಲ್ಲಿ 575 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ.<br>ಕೃಷಿ ಹೊಂಡಗಳನ್ನು ನಿರ್ಮಿಸಿದ ಅಧಿಕೃತ ವರದಿಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿಯವರು ವರದಿ ನೀಡುತ್ತಾರೆ. |
| ಈ) | 2018-2019 ಮತ್ತು 2019- | ಕೃಷಿ ಇಲಾಖೆ: ರಾಜ್ಯದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಲು 2018-2019 ನೇ ಸಾಲಿನಲ್ಲಿ ರೂ. |

| | | |
|---|---|---|
| | 2020ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಲು ಮಾಡಿರುವ ವೆಚ್ಚ ಎಷ್ಟು | 29944.27 ಲಕ್ಷಗಳನ್ನು ಮತ್ತು 2019-2020 ನೇ ಸಾಲಿನ ಜನವರಿ ಮಾಹೆಯ ಅಂತ್ಯದವರೆಗೆ ರೂ 12324.95 ಲಕ್ಷಗಳ ವೆಚ್ಚ ಭರಿಸಲಾಗಿದೆ.<br>**ಜಲಾನಯನ ಅಭಿವೃದ್ಧಿ ಇಲಾಖೆ:** ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ಇಲಾಖಾ ವತಿಯಿಂದ 2018-19ನೇ ಸಾಲಿನಲ್ಲಿ ರೂ.1224.30 ಲಕ್ಷ ಮತ್ತು 2019-20ನೇ ಸಾಲಿನಲ್ಲಿ ರೂ. 364.32 ಲಕ್ಷ ವೆಚ್ಚ ಭರಿಸಲಾಗಿದೆ. |

ಸಂಖ್ಯೆ: AGRI-AML-41/2020

(ಬಿ.ಸಿ.ಪಾಟೀಲ್) 2/3/2020
ಕೃಷಿ ಸಚಿವರು